# ನಾಗಾರ್ಜುನ ಹೊಸ ಅವತಾರ





ತೆಲುಗಿನ 'ಮಾಸ್ ಸ್ಟಾರ್' ಎಂದೇ ಖ್ಯಾತಿ ಹೊಂದಿರುವ ನಾಗಾರ್ಜುನ ಚಿರಜವ್ವನಿಗ. 26 ವರ್ಷಗಳಿಂದ ಹೀರೊ ಆಗಿ ನಟಿಸುತ್ತಿದ್ದರೂ ವಯಸ್ಸೇ ಗೊತ್ತಾಗುವುದಿಲ್ಲ. ನಾಗಾರ್ಜುನಗೆ 52 ವರ್ಷವಾಗಿದೆ ಎಂದರೆ ಯಾರೂ ನಂಬುವುದಿಲ್ಲ. ಈಗಲೂ ಕಾಲೇಜು ಹುಡುಗನ ಪಾತ್ರ ಕೊಟ್ಟರೆ ಅದನ್ನು ಸಮರ್ಥವಾಗಿ ನಿರ್ವಹಿಸಬಲ್ಲ 'ಲುಕ್' ಇದೆ. ಕಾಲೇಜು ಹುಡುಗಿಯರ ಮನ ಗೆಲ್ಲುವಂತಹ ಮೈಕಟ್ಟು ಹೊಂದಿರುವ ನಾಗಾರ್ಜುನರ ಹೊಸ ಲುಕ್ ಇಲ್ಲಿದೆ ನೋಡಿ!

ಈ ಆಧ್ಯಾತ್ಮಿಕ ಮೇಕಪ್‌ನಲ್ಲಿ ನಾಗಾರ್ಜುನರನ್ನು ನೋಡಿದರೆ ಬಹುಶಃ ಇನ್ನು ಮುಂದೆ ಕಾಲೇಜು ಹುಡುಗಿಯರು ಅವರ ಸಿನಿಮಾಗಳಿಗೆ ಬರಲಿಕ್ಕಿಲ್ಲವೇನೊ?

'ಶಿರಡಿ ಸಾಯಿ' ಎಂಬ ಈ ಹೊಸ ಚಿತ್ರದಲ್ಲಿ ನಾಗಾರ್ಜುನ ಶಿರಡಿ ಸಾಯಿಬಾಬಾ ಅವರ ಪಾತ್ರದಲ್ಲಿ ತುಂಬ ತನ್ಮಯರಾಗಿ ನಟಿಸಿದ್ದಾರಂತೆ. 'ಈ ಮೇಕಪ್‌ನಲ್ಲಂತೂ ನಾಗಾರ್ಜುನರನ್ನು ಗುರುತು ಹಿಡಿಯಲೇ ಆಗುವುದಿಲ್ಲ' ಎನ್ನುವುದು ಎಲ್ಲರ ಉದ್ಗಾರ. ಆದರೆ ಅದಕ್ಕಿಂತ ಹೆಚ್ಚಾಗಿ ನಾಗಾರ್ಜುನ ಈ ಪಾತ್ರದ ತನ್ಮಯತೆಗಾಗಿ ತಮ್ಮ ಜೀವನಶೈಲಿಯಲ್ಲಿ ಸಾಕಷ್ಟು ಬದಲಾವಣೆ ಮಾಡಿಕೊಂಡಿದ್ದಾರಂತೆ. ಕಳೆದ 2 ತಿಂಗಳಿಂದ ಪೂರ್ತಿ ಸಸ್ಯಾಹಾರಿಯಾಗಿದ್ದಾರಂತೆ. ಮಾತ್ರವಲ್ಲ ಅತ್ಯಂತ ಕಡಿಮೆ ಮಾತು ರೂಢಿಸಿಕೊಂಡಿದ್ದಾರಂತೆ!

ಈ ಹಿಂದೆ 'ಅನ್ನಮಯ್ಯ' ಮತ್ತು 'ಶ್ರೀ ರಾಮದಾಸು' ಚಿತ್ರದಲ್ಲಿ ಹೀಗೆಯೇ ನಾಗಾರ್ಜುನ ಭಕ್ತಿಪ್ರಧಾನ ಪಾತ್ರಗಳನ್ನು ನಿರ್ವಹಿಸಿದ್ದರು. 'ಅನ್ನಮಯ್ಯ' ಗಳಿಕೆಯಲ್ಲೂ ದಾಖಲೆ ನಿರ್ಮಿಸಿತ್ತು. ಮಾತ್ರವಲ್ಲ, 98ರ ರಾಷ್ಟ್ರೀಯ ಸಿನಿಮಾ ಪ್ರಶಸ್ತಿ ಪ್ರಕಟವಾದ ಸಂದರ್ಭದಲ್ಲಿ ನಾಗಾರ್ಜುನ ಪಾತ್ರ ನಿರ್ವಹಣೆ ವಿಶೇಷ ಜ್ಯೂರಿ ಮನ್ನಣೆ ಸಿಕ್ಕಿತ್ತು. ಆ ಎರಡು ಚಿತ್ರಗಳ ಆಧ್ಯಾತ್ಮಿಕ ಪಾತ್ರಗಳ ನಿರ್ವಹಣೆ ಎಷ್ಟು ಚೆನ್ನಾಗಿತ್ತೆಂದರೆ, ಇನ್ನೇನು ನಾಗಾರ್ಜುನ ಪೋಷಕ ಪಾತ್ರಕ್ಕೆ ವರ್ಗಾ ಆಗಲಿದ್ದಾರೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಮತ್ತೆ ಆ್ಯಕ್ಷನ್ ಚಿತ್ರಗಳನ್ನು ನೀಡಿದ ನಾಗಾರ್ಜುನ, ಅಭಿಮಾನಿಗಳ ಮನರಂಜಿಸಿದರು. ಕಳೆದ ವರ್ಷದ ಕೊನೆಗೆ ತೆರೆಗೆ ಬಂದ ರಾಜನ್ನ ಕೂಡಾ ಯಶಸ್ವಿ ಸಿನಿಮಾ ಅನ್ನಿಸಿಕೊಂಡಿತು.

ಮೊದಲ ಪತ್ನಿ ಲಕ್ಷ್ಮಿಗೆ ಡೈವೋರ್ಸ್ ಕೊಟ್ಟು, ಚಿತ್ರನಟಿ ಅಮಲ ಜತೆಗೆ ಸಂಸಾರ ಹೂಡಿರುವ ನಾಗಾರ್ಜುನ ನಡುವೆ ಬಾಲಿವುಡ್ ನಟಿ ಟಬೂಳ ಪ್ರೇಮಪಾಶದಲ್ಲಿ ಸಿಲುಕಿದ್ದೂ ನಡೆಯಿತು. ಆದರೆ ಅಮಲ ಗಂಡನನ್ನು ಬಿಟ್ಟು ಕೊಡಲಿಲ್ಲ. ಟಬೂ ನಿರ್ಗಮನದ ನಂತರ ಸದ್ಯಕ್ಕೆ ನಾಗಾರ್ಜುನ– ಅಮಲ ನೆಮ್ಮದಿಯಾಗಿದ್ದಾರಂತೆ. ಈ ನಡುವೆ ಕೆಲವು ಸಿನಿಮಾಗಳು ತೋಪೆದ್ದು, ರಾಜಕೀಯದ ಜಂಜಾಟಕ್ಕೂ ನಾಗಾರ್ಜುನ ಧುಮುಕಿದ್ದು ಸುದ್ದಿಯಾಯಿತು. ಚಿರಂಜೀವಿಗೆ ಎದುರಾಗಿ ನಾಗಾರ್ಜುನರನ್ನು ರಾಜಕೀಯವಾಗಿ ಬಳಸುವ, ಬೆಳೆಸುವ ಯತ್ನವೂ ನಡೆಯಿತು.

ಸಿನಿಮಾದ ಮತ್ತು ನಿಜಜೀವನದ ಏಳುಬೀಳುಗಳು ಏನೇ ಇದ್ದರೂ ನಾಗಾರ್ಜುನ ಅವರದ್ದೇ ಆದ ಅಭಿಮಾನಿ ವರ್ಗವನ್ನು ಹೊಂದಿದ್ದಾರೆ. ಅದು ಅಕ್ಕಿನೇನಿ ಕುಟುಂಬದ ಕೊಡುಗೆಯೂ ಇರಬಹುದು. ಸದ್ಯಕ್ಕಂತೂ ನಾಗಾರ್ಜುನ ಅವರ ಹೊಸ ಲುಕ್ ಸಖತ್ ಸುದ್ದಿ ಮಾಡುತ್ತಿದೆ.

■ ಬಿಂದು